ಅಧ್ಯಕ್ಷರು : ಹೇಳಿ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ಮಾನ್ಯ ಅಧ್ಯಕ್ಷರೇ, ಮೊನ್ನೆ ಸಿಂಡಿಕೇಟ್‌ಗೆ ...

ಶ್ರೀ ಪಿ.ಜಿ.ಆರ್. ಸಿಂಧ್ಯ : ಮಾನ್ಯ ಜಿ.ವಿ. ಶ್ರೀರಾಮರೆಡ್ಡಿಯವರೇ, ಈಗ ಮಾನ್ಯ ಮಂತ್ರಿಗಳಾದ ಮಂಜುನಾಥ್‌ರವರು ಬರುತ್ತಾರೆ. ಅವರು ಬಂದಮೇಲೆ ತೆಗೆದುಕೊಳ್ಳಬಹುದು, so that he can reply ಅಂತ ಅಷ್ಟೆ, ನನ್ನದು ಏನೂ ಇಲ್ಲ. ನೀವು ಮಾತನಾಡುವುದಾದರೆ ಮಾತನಾಡಿ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ಮಾನ್ಯ ಅಧ್ಯಕ್ಷರೇ, ಅವರು ಬರುತ್ತಾರೋ, ಇಲ್ಲವೊ, ಅವರಿಗೆ ಆರೋಗ್ಯ ಸರಿಯಾಗಿ ಇಲ್ಲ.

ಶ್ರೀ ಜೆ.ಸಿ. ಮಾಧುಸ್ವಾಮಿ : ನೋಡೋಣ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ಆಯಿತು.

ಅಧ್ಯಕ್ಷರು : ಈಗ ಪ್ರಶ್ನೋತ್ತರವನ್ನು ತೆಗೆದುಕೊಳ್ಳೋಣ.

8. ಪ್ರಶ್ನೋತ್ತರಗಳು

ಅ) ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಸದನದಲ್ಲಿ ನೀಡಲಾದ ಉತ್ತರಗಳು.

ನ್ಯಾಷನಲ್ ಹಾರ್ಟಿಕಲ್ಚರ್ ಬೋರ್ಡ್‌ನಿಂದ ಅನುಷ್ಠಾನಗೊಂಡ ಯೋಜನೆಗಳು.

601(6251) : ಶ್ರೀ ಡಿ.ಆರ್. ಪಾಟೀಲ್ (ಗದಗ್) ಮಾನ್ಯ ತೋಟಗಾರಿಕೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ತೋಟಗಾರಿಕೆಯಲ್ಲಿ ತೊಡಗಿರುವ ರೈತರಿಗೆ ಅನುಕೂಲವಾಗುವ ರಾಜ್ಯ ಮತ್ತು ಕೇಂದ್ರ ಸರ್ಕಾರದ ಕಾರ್ಯಕ್ರಮಗಳು ಯಾವುವು?

ಆ) ನ್ಯಾಷನಲ್ ಹಾರ್ಟಿಕಲ್ಚರ್ ಬೋರ್ಡ್ ಮುಖಾಂತರ ಅನುಷ್ಠಾನಗೊಳ್ಳುತ್ತಿರುವ ಯೋಜನೆಗಳು ಯಾವುವು?

ಇ) ಎನ್.ಎಚ್.ಬಿ. ಯಿಂದ ಕಳೆದ ಐದು ವರ್ಷಗಳಲ್ಲಿ ಕರ್ನಾಟಕಕ್ಕೆ ಮಂಜೂರಾದ ಸಹಾಯವೆಷ್ಟು; ಆ ಪೈಕಿ ಲಾಭ ಪಡೆದುಕೊಂಡ ಜಿಲ್ಲೆಗಳಾವುವು (ಜಿಲ್ಲಾವಾರು ವಿವರ ನೀಡುವುದು)

ಈ) ಯೋಜನೆಗಳ ಲಾಭವನ್ನು ರೈತರಿಗೆ ವರ್ಗಾಯಿಸಲು ಸರ್ಕಾರದ ಕ್ರಮಗಳೇನು?

ಶ್ರೀ ಆರ್. ಶ್ರೀನಿವಾಸ್ (ತೋಟಗಾರಿಕೆ ಸಚಿವರು):

ಅ) ತೋಟಗಾರಿಕೆಯಲ್ಲಿ ತೊಡಗಿರುವ ರೈತರಿಗೆ ಅನುಕೂಲವಾಗಲು ಹಮ್ಮಿಕೊಂಡಿರುವ ಕಾಯಕ್ರಮಗಳು ಈ ಕೆಳಗಿನಂತಿವೆ.

1. ತೋಟಗಾರಿಕೆ ಕ್ಷೇತ್ರ ಮತ್ತು ನರ್ಸರಿಗಳ ಅಭಿವೃದ್ಧಿ ಮತ್ತು ನಿರ್ವಹಣೆ ಯೋಜನೆಯಡಿ ವಿವಿಧ ರೀತಿಯ ತೋಟಗಾರಿಕೆ ಬೆಳೆಗಳ ಉತ್ಕೃಷ್ಟ ಗುಣಮಟ್ಟದ ಕಸಿ/ಸಸಿಗಳನ್ನು ಉತ್ಪಾದಿಸಿ, ರೈತರಿಗೆ ಸುಲಭದರದಲ್ಲಿ ವಿತರಿಸುವ ಮೂಲಕ ತೋಟಗಾರಿಕೆ ಬೆಳೆಗಳ ಪ್ರದೇಶ ವಿಸ್ತರಣೆಗೆ, ಉತ್ಪಾದಕತೆ ಮತ್ತು ಉತ್ಪಾದನೆ ಹೆಚ್ಚಿಸುವಲ್ಲಿ ಸಹಾಯಕವಾಗಿದೆ.
2. ಇಲಾಖಾ ಪ್ರಯೋಗ ಶಾಲೆಗಳಲ್ಲಿ ರೈತರ ತೋಟಗಳಲ್ಲಿನ ಮಣ್ಣು ಮತ್ತು ನೀರಿನ ಮಾದರಿಗಳನ್ನು ವಿಶ್ಲೇಷಿಸಿ ಅದಕ್ಕನುಗುಣವಾಗಿ ವಿವಿಧ ತೋಟಗಾರಿಕೆ ಬೆಳೆಗಳ ಬೇಸಾಯವನ್ನು ಉತ್ತಮ ಪಡಿಸಲು ಸೂಕ್ತ ಸಲಹೆ ನೀಡಲಾಗುತ್ತಿದೆ.

3. ತೋಟಗಾರಿಕೆ ಬೆಳೆಗಳಲ್ಲಿ ಕಂಡಬರುವ ಕೀಟ ರೋಗಗಳ ನಿಯಂತ್ರಣ ಕುರಿತು ಸೂಕ್ತ ತಾಂತ್ರಿಕ ಸಲಹೆ ನೀಡುವುದು ಹಾಗೂ ರಿಯಾಯಿತಿ ದರದಲ್ಲಿ ಸಸ್ಯ ಸಂರಕ್ಷಣಾ ಔಷಧಿ ಮತ್ತು ಉಪಕರಣಗಳನ್ನು ವಿತರಿಸುವುದು. ತೆಂಗಿನ ಕಪ್ಪು ಕಲೆ ಹುಳು ನಿಯಂತ್ರಣಕ್ಕಾಗಿ ಪರೋಪ ಜೀವಿಗಳ ಉತ್ಪಾದನೆ ಮತ್ತು ವಿತರಣೆ.
4. ರಾಜ್ಯದಲ್ಲಿ ಸಣ್ಣ ಮತ್ತು ಅತಿಸಣ್ಣ ರೈತರು ತೋಟಗಾರಿಕೆ ಬೆಳೆಗಳನ್ನು ಬೆಳೆಯಲು ಉತ್ತೇಜಿಸುವ ದೃಷ್ಟಿಯಿಂದ ನಬಾರ್ಡ್ ಮೂಲಕ ಸಾಲ–ಸೌಲಭ್ಯಗಳನ್ನು ಕಲ್ಪಿಸುವುದಲ್ಲದೇ, ತೋಟಗಾರಿಕೆಗೆ ಸಂಬಂಧಿಸಿದಂತೆ ವಿವಿಧ ಚಟುವಟಿಕೆಗಳಿಗೂ ಸಾಲ–ಸೌಲಭ್ಯವನ್ನು ಒದಗಿಸಲಾಗುತ್ತಿದೆ.
5. ತೋಟಗಾರಿಕೆ ಬೆಳೆಗಳ ಸುಧಾರಿತ ಬೇಸಾಯ, ಕೊಯ್ಲೋತ್ತರ ತಂತ್ರಜ್ಞಾನ, ಸಂಸ್ಕರಣೆ ಇತ್ಯಾದಿ ವಿಷಯಗಳ ಬಗ್ಗೆ ತರಬೇತಿ, ಪ್ರಾತ್ಯಕ್ಷತೆ, ವಿಚಾರಸಂಕಿರಣಗಳನ್ನು ಏರ್ಪಡಿಸುವ ಮೂಲಕ ತೋಟಗಾರಿಕೆ ಬೆಳೆಗಳ ಅಭಿವೃದ್ಧಿಯನ್ನು ಕೈಗೊಳ್ಳಲಾಗುತ್ತಿದೆ.
6. ತೋಟಗಾರಿಕೆ ಬೆಳೆಗಳಲ್ಲಿ ಹನಿ–ನೀರಾವರಿ ಪದ್ಧತಿ ಅಳವಡಿಕೆಗೆ, ಹಸಿರುಮನೆ ಕೃಷಿಗೆ, ನೆರಳು ಪರದೆ ಬಳಕೆಗೆ ಸಹಾಯಧನ ವಿತರಿಸುವುದು.
7. ತೆಂಗು ಬೆಳೆಯ ಅಭಿವೃದ್ಧಿಗಾಗಿ, ಪ್ರಾತ್ಯಕ್ಷತಾ ತಾಕುಗಳನ್ನು ಮತ್ತು ಸಾವಯವ ಘಟಕಗಳನ್ನು ಸ್ಥಾಪಿಸಲು ಸಹಾಯಧನ ವಿತರಿಸುವುದು, ತೆಂಗು ಪ್ರದೇಶ ವಿಸ್ತರಣೆಗೆ ತೆಂಗು ಅಭಿವೃದ್ಧಿ ಮಂಡಳಿಯಿಂದ ಸಹಾಯಧನ ವಿತರಣೆ.
8. ನೂತನ ವಿಸ್ತೃತ ಮಾದರಿಯಡಿ ತೋಟಗಾರಿಕೆ ಅಭಿವೃದ್ಧಿ ಯೋಜನೆಯಡಿ ಉಷ್ಣ ಮತ್ತು ಶುಷ್ಕವಲಯ ಹಣ್ಣುಗಳ ಅಭಿವೃದ್ಧಿ, ತರಕಾರಿ ಬೆಳೆಗಳು, ಪುಷ್ಪಬೆಳೆ, ಕೋಕೋ, ಗೇರು, ಸಾಂಬಾರು ಬೆಳೆ, ಅಣಬೆ ಬೇಸಾಯ, ಸಾವಯವ ತೋಟಗಾರಿಕೆ, ಔಷಧೀಯ ಮತ್ತು ಸುಗಂಧಿಕ ಬೆಳೆಗಳ ಬಗ್ಗೆ ಹಲವಾರು ಅಭಿವೃದ್ಧಿ ಕಾರ್ಯಕ್ರಮಗಳಿದ್ದು, ಪ್ರದೇಶ ವಿಸ್ತರಣೆ, ನರ್ಸರಿಗಳ ಸ್ಥಾಪನೆಗೆ, ಸಸ್ಯೋತ್ಪಾದನೆಗೆ, ಸಂರಕ್ಷಿತ ಬೇಸಾಯ, ಪ್ರಾತ್ಯಕ್ಷತೆಗಳಿಗೆ, ತರಬೇತಿ, ಕೊಯ್ಲೋತ್ತರ ನಿರ್ವಹಣೆ, ಸಂಸ್ಕರಣೆ, ಇತ್ಯಾದಿ ಅಭಿವೃದ್ಧಿಗಾಗಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ.
9. ರಾಜ್ಯದಲ್ಲಿ ತಾಳೆಬೆಳೆ ಅಭಿವೃದ್ಧಿಗೆ ಕಾರ್ಯಕ್ರಮಗಳಿರುತ್ತವೆ.

ಆ) ರಾಷ್ಟ್ರೀಯ ಕೈಗಾರಿಕಾ ಮಂಡಳಿ ವತಿಯಿಂದ ಅನುಷ್ಠಾನಗೊಳ್ಳುವ ಯೋಜನೆಗಳು ಈ ಕೆಳಕಂಡಂತಿವೆ.

1. ಉತ್ಪಾದನೆ ಹಾಗೂ ಕೊಯ್ಲುನಂತರದ ನಿರ್ವಹಣೆ ಮೂಲಕ ವಾಣಿಜ್ಯ ತೋಟಗಾರಿಕಾ ಅಭಿವೃದ್ಧಿ ಯೋಜನೆ
2. ತೋಟಗಾರಿಕಾ ಉತ್ಪನ್ನಗಳಿಗಾಗಿ ಶೈತ್ಯಾಗಾರ/ಉಗ್ರಾಣಗಳ ರಚನೆ/ ಆಧುನೀಕರಣಕ್ಕಾಗಿ ಬಂಡವಾಳ ವಿನಿಯೋಗದ ಸಹಾಯಧನ ಯೋಜನೆ
3. ತಂತ್ರಜ್ಞಾನ ಅಭಿವೃದ್ಧಿ ಮತ್ತು ವರ್ಗಾವಣೆ ಯೋಜನೆ
4. ತೋಟಗಾರಿಕಾ ಬೆಳೆಗಳ ಮಾರುಕಟ್ಟೆ ಮಾಹಿತಿ ಸೇವೆ ಯೋಜನೆ
5. ತೋಟಗಾರಿಕೆಯನ್ನು ಪ್ರೋತ್ಸಾಹಿಸುವ ಸೇವೆ ಯೋಜನೆ

ಇ) ಎನ್.ಹೆಚ್.ಬಿ. ಸಂಸ್ಥೆವತಿಯಿಂದ ಕಳೆದ 5 ವರ್ಷಗಳಲ್ಲಿ ಅಂದರೆ 2000–01 ರಿಂದ 2004–05ರವರೆಗೆ ಕರ್ನಾಟಕಕ್ಕೆ ಮಂಜೂರಾದ ಸಹಾಯಧನದ ಮೊತ್ತ ರೂ. 3691.67 ಲಕ್ಷಗಳು.

ಎನ್.ಹೆಚ್.ಬಿ. ಸಂಸ್ಥೆಯಿಂದ ಲಾಭ ಪಡೆದುಕೊಂಡ ಜಿಲ್ಲಾವಾರು ಮಾಹಿತಿ ಈ ಕೆಳಕಂಡಂತಿದೆ.

ಕ್ರಮ	ಜಿಲ್ಲೆಗಳು	ಮಂಜೂರಾದ
1	ಬೆಂಗಳೂರು (ನಗರ ಮತ್ತು ಗ್ರಾಮಾಂತರ)	1820.59
2	ಬೆಳಗಾಂ	79.28
3	ಬಿಜಾಪುರ	220.13
4	ಮೈಸೂರು	48.78
5	ಮಂಡ್ಯ	41.52
6	ಕೋಲಾರ	33.31
7	ಮಡಿಕೇರಿ	105.38
8	ತುಮಕೂರು	65.55
9	ಧಾರವಾಡ	104.62
10	ಹಾವೇರಿ	254.28
11	ಉಡುಪಿ	23.91
12	ಚಿತ್ರದುರ್ಗ	280.37
13	ಹಾಸನ	17.06
14	ಚಿಕ್ಕಮಗಳೂರು	16.56
15	ಚಾಮರಾಜನಗರ	41.97
16	ಬಳ್ಳಾರಿ	400.07
17	ದಾವಣಗೆರೆ	30.95
18	ಕಾರವಾರ	11.08
19	ದಕ್ಷಿಣ ಕನ್ನಡ	3.72
20	ಶಿವಮೊಗ್ಗ	45.22
21	ಗುಲ್ಬರ್ಗಾ	47.32
	ಒಟ್ಟು	3691.67

ಈ) ಈ ಯೋಜನೆಗಳ ಲಾಭವನ್ನು ರೈತರಿಗೆ ವರ್ಗಾಯಿಸಲು ವಿಚಾರ ಸಂಕಿರಣ/ ಕಾರ್ಯಾಗಾರಗಳು/ ತರಬೇತಿಗಳ ಮೂಲಕ ಮತ್ತು ಪ್ರಚಾರ ಸಾಮಗ್ರಿಗಳನ್ನು ಮುದ್ರಿಸಿ ರೈತರಿಗೆ ವಿತರಿಸಿ ವ್ಯಾಪಕ ಪ್ರಚಾರ ನೀಡಲಾಗುತ್ತಿದೆ.

ಶ್ರೀ ಡಿ.ಆರ್. ಪಾಟೀಲ್ : ಮಾನ್ಯ ಅಧ್ಯಕ್ಷರೇ, ಇವರು ಕೊಟ್ಟಿರುವ ಉತ್ತರದ ಪಟ್ಟಿಯನ್ನು ನೋಡಿದರೆ, ಎನ್.ಹೆಚ್.ಬಿ.ಯಿಂದ ಲಾಭವನ್ನು ಪಡೆದುಕೊಂಡಿರುವವರು

ಬೆಂಗಳೂರಿನವರೇ ಅರ್ಧ ಮಂದಿ ಇದ್ದಾರೆ. ಅವರು ಯಾರ್ಯಾರು? ಯಾವ ಉದ್ದೇಶಕ್ಕಾಗಿ ಪಡೆದುಕೊಂಡಿದ್ದಾರೆ? ಇದನ್ನು ದಯವಿಟ್ಟು ಪ್ರತಿ ತಾಲ್ಲೂಕಿನಿಂದ ಕನಿಷ್ಠ ಹತ್ತತ್ತು ಮಂದಿ ರೈತರಿಗೆ, ಈ ಲಾಭ ಸಿಗುವ ರೀತಿಯಲ್ಲಿ, ನಿಮ್ಮ ಅಧಿಕಾರಿಗಳಿಗೆ ಹೇಳಿ, ಅವರನ್ನು ಮೋಟಿವೇಟ್ ಮಾಡಿ, ಪ್ರಪೋಸಲ್ ತೆಗೆದುಕೊಳ್ಳುವಂತಹ ಕೆಲಸವನ್ನು ಮಾಡಬೇಕು. ಈಗ ನಮ್ಮ ಗದಗ್ ಆಗಲಿ, ಬಾಗಲಕೋಟೆಯಾಗಲಿ, ಕೊಪ್ಪಳವಾಗಲಿ, ರಾಯಚೂರು ಆಗಲಿ, ಬೀದರ್ ಆಗಲಿ, ಒಂದು ಜಿಲ್ಲೆಯೂ ಇಲ್ಲ. ಈ 5 ವರ್ಷಗಳಲ್ಲಿ ಒಬ್ಬರಿಗೂ ಸಹಿತ ಈ ಎನ್.ಹೆಚ್.ಬಿ.ಯಿಂದ ಲಾಭ ದೊರೆತಿಲ್ಲವೆಂದರೆ ಹೇಗೆ? ಇದರ ಜೊತೆಗೆ ನೀವು ಹಾರ್ಟಿಕಲ್ಚರ್ ಮಾರ್ಕೆಟ್ ಇನ್‌ಫರ್‌ಮೇಶನ್ ಅನ್ನು ಎಲ್ಲಾ "ರೈತ ಸಂಪರ್ಕ ಕೇಂದ್ರದೊಳಗೆ ಸಿಗುವ ಹಾಗೆ ಅನುಕೂಲವನ್ನು ಮಾಡಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಆರ್. ಶ್ರೀನಿವಾಸ್ : ಮಾನ್ಯ ಅಧ್ಯಕ್ಷರೇ, "ನ್ಯಾಷನಲ್ ಹಾರ್ಟಿಕಲ್ಚರ್ ಬೋರ್ಡ್" ಇದು ಕೆಲವೇ ಜನರಿಗೆ ಸೀಮಿತವಾಗಿದೆ ಎಂದು ಗೌರವಾನ್ವಿತ ಮಾನ್ಯ ಸದಸ್ಯರು ಏನು ಹೇಳುತ್ತಿದ್ದಾರೋ ಅದನ್ನು ನಾನೂ ಒಪ್ಪಿಕೊಳ್ಳುತ್ತೇನೆ. ಬಡ ರೈತರಿಗೆ ಎನ್.ಹೆಚ್.ಬಿ. ಎಂದರೆ ಏನು? ಎನ್.ಹೆಚ್.ಬಿ. ಬಗ್ಗೆ ಯಾವ ಒಂದು ರಿಯಾಯಿತಿ ಸಿಗುತ್ತದೆ? ಆ ಮಾಹಿತಿ ಬಹಳ ಜನರಿಗೆ ಗೊತ್ತಿಲ್ಲ. ಆದುದರಿಂದ ಮಾನ್ಯ ಸದಸ್ಯರು ಏನು ಹೇಳಿದ್ದಾರೆ? ಅದರ ಬಗ್ಗೆ ನಾನು ಎಲ್ಲಾ ಸಿಬ್ಬಂದಿ ವರ್ಗಕ್ಕೆ ತಿಳಿಸಿದ್ದೇನೆ. ಇವರು ವಲಸೆ ಬಂದವರಾಗಿದ್ದು ಹಿಂದೆ ಬಹುಶಃ ಆಟೊಮೊಬೈಲ್ಸ್‌ನಂತಹ ದೊಡ್ಡ ದೊಡ್ಡ ಫ್ಯಾಕ್ಟರಿಗಳನ್ನು ಮಾಡಿಕೊಂಡು, ಅಲ್ಲಿ ಸಬ್ಸಿಡಿಗಳನ್ನು ತಿಂದುಬಿಟ್ಟು ಈಗ ಇಲ್ಲಿ ಎನ್.ಹೆಚ್.ಬಿ. ಸಬ್ಸಿಡಿಗೆ ಬಂದಿದ್ದಾರೆ. ಇಲ್ಲಿ ಫ್ಲೋರಿಕಲ್ಚರ್ ಎಂದು ಮಾಡಿಕೊಂಡು, ಕೋಟಿಗಟ್ಟಲೆ ಹಣವನ್ನು ಪಡೆದಿದ್ದಾರೆ. ಇವರು 2 ಎಕರೆಯ ಒಂದು ಫಾರಂ ಅನ್ನು ಮಾಡಿದರೆ, 4 ರಿಂದ 5 ಕೋಟಿ ರೂಪಾಯಿಗಳನ್ನು ಸಾಲ ಕೊಡುವಂಥಾದ್ದು ಎಲ್ಲಾದರೂ ನೋಡಿದ್ದೀರಾ? ನಾವು 50 ಎಕರೆಗಳು ಆಧಾರವಾಗಿ ಕೊಟ್ಟರೂ ನಮಗೆ ಪಿ.ಎಲ್.ಡಿ. ಬ್ಯಾಂಕ್‌ನವರು 5, 10 ಲಕ್ಷ ರೂಪಾಯಿಗಳನ್ನು ಕೊಡುವುದಿಲ್ಲ. ಇಲ್ಲಿ ಎರಡು ಎಕರೆಗೆ 4 ಕೋಟಿ ರೂಪಾಯಿಗಳನ್ನು ತೆಗೆದುಕೊಂಡು ಒಂದು ಕೋಟಿ ರೂಪಾಯಿಗಳ ಸಬ್ಸಿಡಿಯನ್ನು ತೆಗೆದುಕೊಳ್ಳುತ್ತಾರೆ. ಈ ವ್ಯವಸ್ಥೆಯು ನಿಜವಾಗಿಯೂ ಕೂಡ ಹಳ್ಳಿಗಳ ಮಟ್ಟಕ್ಕೆ ಹೋಗುವ ಬಗ್ಗೆ ನಾವು ಚಿಂತನೆಯನ್ನು ಮಾಡುತ್ತಿದ್ದೇವೆ. ಇದನ್ನು ಖಂಡಿತವಾಗಿಯೂ ಕೂಡ ಇದು ಹಳ್ಳಿಯ ಮಟ್ಟಕ್ಕೆ....

ಶ್ರೀ ಜೆ.ಸಿ. ಮಾಧುಸ್ವಾಮಿ : ತಾವು ಏನು ಪ್ರಶ್ನೆ ಮಾಡುತ್ತಿದ್ದೀರೋ, ಅಥವಾ ಉತ್ತರವನ್ನು ಕೊಡುತ್ತಿದ್ದಿರೋ?

ಶ್ರೀ ಆರ್. ಶ್ರೀನಿವಾಸ್ : ಮಾನ್ಯ ಜೆ.ಸಿ. ಮಾಧುಸ್ವಾಮಿಯವರೂ ಕೂಡ ಮೊನ್ನೆ ದಿವಸ ಈ ವಿಷಯವನ್ನು ಪ್ರಸ್ತಾಪ ಮಾಡಿದ್ದಾರೆ. ನಿಜ, ಅವರು ಒಂದು ಪಾಲಿಸಿಯನ್ನು ಮಾಡಿದ್ದಾರೆ, ಬಹಳ ಕಟ್ಟುನಿಟ್ಟಾಗಿ ರೆಕಾರ್ಡ್ಸ್‌ಗಳನ್ನು ಕೊಡಬೇಕೆಂದು ಮಾಡಿದ್ದಾರೆ. ನಾನು ಇದರ ಬಗ್ಗೆ ಎಂ.ಡಿ. ಯವರ ಹತ್ತಿರ ಮಾತನಾಡಿದ್ದೇನೆ. ತಾವು ಈಗ ಏನು ಪ್ರಸ್ತಾಪ ಮಾಡಿದ್ದೀರೋ, ಅದನ್ನು ಎಂ.ಡಿ.ಯವರ ಹತ್ತಿರ ಮಾತನಾಡಿದ್ದು ಈಗ ಸ್ವಲ್ಪ ಎಲ್ಲಾ ಸಡಿಲಗೊಳಿಸಿದ್ದೇನೆ. ಅವರ ಕಂಡೀಷನ್‌ಗಳನ್ನು ನೋಡಿ ಬಿಟ್ಟರ್, ಬಹುಶಃ ಯಾವ ಸಣ್ಣ ರೈತರೂ ಮುಂದೆ ಬರುವುದಿಲ್ಲ. ದೊಡ್ಡ ದೊಡ್ಡ ಪ್ರಾಜೆಕ್ಟ್, ಏಜೆನ್ಸಿಯವರು, ಏನು ಇದ್ದಾರೆ, ಆ ಏಜೆನ್ಸಿಯವರಿಗೆ ಇಷ್ಟು ಪರ್ಸೆಂಟ್

ಎಂದು ಫಿಕ್ಸ್ ಮಾಡಿಬಿಡುತ್ತಾರೆ. ಅವನು ಕಂಪ್ಲೀಟ್ ಎರಡು ಎಕರೆಗಳಿಗೆ 4 ಕೋಟಿ, 3 ಕೋಟಿ ರೂಪಯಿಗಳ ಪ್ರಾಜೆಕ್ಟ್‌ನ್ನು ತಯಾರು ಮಾಡಿ ಬಿಡುವುದು. ಅವರಿಗೂ ಎನ್.ಹೆಚ್.ಬಿ. ಯವರಿಗೂ ಹೊಂದಾಣಿಕೆಯನ್ನು ಮಾಡಿಕೊಂಡಿರುವುದು. ಆಮೇಲೆ ಆ ಹಣವನ್ನು ರಿಲೀಜ್ ಮಾಡಿಕೊಂಡು ಹೋಗುತ್ತಿರುವುದು. ಇಲ್ಲಿ ಬಡ ರೈತರ ಬಗ್ಗೆ ಚಿಂತೆ ಮಾಡುವಂತಹ ವ್ಯವಸ್ಥೆ ಇಲ್ಲ. ನಾನು ಇದನ್ನು ಖಂಡಿತವಾಗಿಯೂ ಕೂಡ, ಪರಿಗಣಿಸಿ ಈಗಾಗಲೇ ಸೂಚನೆಯನ್ನು ಕೊಟ್ಟಿದ್ದೇವೆ. ಬಹುಶಃ ಇನ್ನು ಮುಂದೆ ಬರುವಂತಹ, ನಮ್ಮಲ್ಲಿರುವಂತಹ ಅಸಿಸ್ಟೆಂಟ್ ಹಾರ್ಟಿಕಲ್ಚರ್ ಆಫೀಸರ್ಸ್ ಅವರು ಹತ್ತತ್ತು ಜನರನ್ನು ಕರೆದುಕೊಂಡು ಬರುವಂತಹ ವ್ಯವಸ್ಥೆಯನ್ನು ಮಾಡುವಂತಹ ವಿಚಾರವನ್ನು ತಮ್ಮ ಮುಖೇನ ಮಾನ್ಯ ಸದಸ್ಯರಿಗೆ ಹೇಳಲಿಚ್ಛಿಸುತ್ತೇನೆ. ಅದೇ ರೀತಿಯಲ್ಲಿ ಏನೇನು ಸೌಲಭ್ಯಗಳನ್ನು ಕೇಂದ್ರ ವಲಯದಿಂದ ಹಾಗೂ ರಾಜ್ಯ ವಲಯದಿಂದ ಕೊಡುತ್ತಿದ್ದೇವೆ ಎಂಬುದರ ಬಗ್ಗೆ ಕೂಡ ನಾನು ವಿವರವಾಗಿ ಉತ್ತರದಲ್ಲಿ ತಿಳಿಸಿದ್ದೇನೆ. ಇನ್ನು ಮುಂದೆ ಕೂಡ "ನ್ಯಾಷನಲ್ ಹಾರ್ಟಿಕಲ್ಚರ್ ಮಿಷನ್" ಒಂದು ಬರುತ್ತಾ ಇದೆ. ಇದರಲ್ಲೂ ರೈತರಿಗೆ ಸೌಲಭ್ಯವನ್ನು ಕೊಡುವಂತಹ ವ್ಯವಸ್ಥೆಯನ್ನು ಮಾಡೋಣ. ಇನ್ನು ಮ್ಯಾಕ್ರೋ ಮ್ಯಾನೇಜ್‌ಮೆಂಟ್ ಎಂದು 21 ಕೋಟಿ ರೂಪಾಯಿಗಳನ್ನು ಕೊಡುವಂಥಾದ್ದು, ಮತ್ತು ಎಲ್ಲಾ ಗಿಡಗಳನ್ನು ಕೊಡುವಂಥ ವ್ಯವಸ್ಥೆಯನ್ನು ಮಾಡಿದ್ದು; 40 ಲಕ್ಷ ಗಿಡಗಳನ್ನು ಈಗಾಗಲೇ ಹಂಚುವುದಕ್ಕೆ ವ್ಯವಸ್ಥೆ ಮಾಡಿದ್ದು ಬಹುಶಃ ಪ್ರತಿಯೊಬ್ಬ ಶಾಸಕರಿಗೂ ಇದು ತಲುಪಿರಬಹುದು. ನಮ್ಮ ಡಿಪಾರ್ಟ್‌ಮೆಂಟ್‌ನವರು ಕಳುಹಿಸಿದ್ದಾರೆ, ನಾನೂ ಕಳುಹಿಸುತ್ತಿದ್ದೇನೆ. ಪ್ರತಿಯೊಂದು ತಾಲ್ಲೂಕಿಗೂ ಕೂಡ ಕನಿಷ್ಠ 5 ಸಾವಿರದಿಂದ 10 ಸಾವಿರ, 15 ಸಾವಿರ ಗಿಡಗಳನ್ನು ಉಚಿತವಾಗಿ ಕೊಡುವುದಕ್ಕೆ ಪ್ರತಿಯೊಬ್ಬರಿಗೂ ಈಗಾಗಲೇ ಮಾಹಿತಿಯನ್ನು ಕಳುಹಿಸಿದ್ದೇನೆ. ಡಿಪಾರ್ಟ್‌ಮೆಂಟ್‌ನವರು ಕಳಿಸುತ್ತಿದ್ದಾರೆ ನಾನು ಕೂಡ ಕಳುಹಿಸುತ್ತಿದ್ದೇವೆ. ಈಗಾಗಲೇ ಗಿಡಗಳ ವಿತರಣೆಯ ಕೆಲಸವೂ ಪ್ರಾರಂಭವಾಗಿದೆ. ಇನ್ನು ಮಾರುಕಟ್ಟೆಯ ಬಗ್ಗೆ ಈಗ ಸಫಲ್ ಹಾಗೂ ಹಾಫ್‌ಕಾಮ್ಸ್ ಏನು ಇದೆ, ಇದನ್ನು ಇನ್ನು ಹೆಚ್ಚು ಸ್ಟ್ರೆಂಗ್ದನ್ ಮಾಡುವುದಕ್ಕೆ ಚಿಂತನೆ ಮಾಡುತ್ತಿದ್ದೇವೆಂದು ನಾನು ತಮ್ಮ ಮುಖಾಂತರ ಮಾನ್ಯ ಸದಸ್ಯರಿಗೆ ಹೇಳಲಿಚ್ಛಿಸುತ್ತೇನೆ.

ಶ್ರೀ ಡಿ.ಆರ್. ಪಾಟೀಲ್ : ಮಾನ್ಯ ಅಧ್ಯಕ್ಷರೇ, ಈಗ ಬೆಂಗಳೂರಿನಲ್ಲಿ ಇದರ ಲಾಭವನ್ನು ಪಡೆದುಕೊಂಡಿರುವವರು ಯಾರ್ಯಾರೆಂಬ ಮಾಹಿತಿ ನಿಮ್ಮ ಹತ್ತಿರ ಇದೆಯಾ?

ಶ್ರೀ ಆರ್. ಶ್ರೀನಿವಾಸ್ : ಆ ಮಾಹಿತಿ ಇಲ್ಲ.

ದೇವನಹಳ್ಳಿ ತಾಲ್ಲೂಕಿನಲ್ಲಿ ಶೀತಲ ಕೇಂದ್ರವನ್ನು ತೆರೆಯಲು ಉದ್ದೇಶ

602(6536) : ಶ್ರೀ ಜಿ. ಚಂದ್ರಣ್ಣ (ದೇವನಹಳ್ಳಿ) ಮಾನ್ಯ ತೋಟಗಾರಿಕೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ದೇವನಹಳ್ಳಿ ತಾಲ್ಲೂಕಿನಲ್ಲಿ ಶೀತಲ ಕೇಂದ್ರವನ್ನು ತೆರೆಯಲು ಉದ್ದೇಶ ಸರ್ಕಾರಕ್ಕಿದೆಯೆ.

ಆ) ದೇವನಹಳ್ಳಿ ತಾಲ್ಲೂಕಿನಲ್ಲಿ ಇಲಾಖೆಗೆ ಸೇರಿದ ಕಛೇರಿಗಳನ್ನು ದುರಸ್ತಿ ಮಾಡಲು ಕ್ರಮ ಏನಾದರೂ ತೆಗೆದುಕೊಳ್ಳಲಾಗಿದೆಯೆ?

ಶ್ರೀ ಆರ್. ಶ್ರೀನಿವಾಸ್ (ತೋಟಗಾರಿಕೆ ಸಚಿವರು):

ಅ) ಸರ್ಕಾರಿ ವಲಯದಡಿ ಶೀತಲಗೃಹ ಸ್ಥಾಪಿಸುವ ಉದ್ದೇಶ ಇರುವುದಿಲ್ಲ. ಆದರೆ ಶೀತಲಗೃಹ ಸ್ಥಾಪಿಸಲು ಮುಂದೆ ಬರುವವರಿಗೆ ಪ್ರೋತ್ಸಾಹ ನೀಡಲಾಗುತ್ತಿದೆ. ಈ ಬಗ್ಗೆ ಭಾರತ ಸರ್ಕಾರದ ರಾಷ್ಟ್ರೀಯ ತೋಟಗಾರಿಕೆ ಮಂಡಳಿ ವತಿಯಿಂದ ತೋಟಗಾರಿಕೆ ಉತ್ಪನ್ನಗಳಿಗೆ ಶೀತಲಗೃಹ/